**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ**

ಒ.ಎಸ್.ನಂಬ್ರಃ 329 /2023
ಪಿ.ಡಬ್ಲ್ಯೂ : 1

ದಿನಾಂಕಃ 29-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಸಿ.ಆರ್. ಪಿ ವಕೀಲರಿಂದಃ

ಸರ್ವೆ ನಂಬರ್ 31/5 ರ ಒಟ್ಟು ಮೂಲ ವಿಸ್ತೀರ್ಣದಲ್ಲಿ 86 ಸೆಂಟ್ಸ್ ಆಗಿತ್ತು ಅದರಲ್ಲಿ 50 ಸೆಂಟ್ಸ ಜಾಗವು ಭೂ ನ್ಯಾಯಮಂಡಳಿ ಆದೇಶದ ಪ್ರಕಾರ ಗೇಣಿದಾರರಿಗೆ ಹೋಗಿರುತ್ತದೆ ಎಂದರೆ ಸರಿ. ಸದರಿ ಜಾಗವು 1989 ರಿಂದ 90 ರ ಆಸು ಪಾಸಿನಲ್ಲಿ ಹೋಗಿರಬಹುದು. ನಿ.ಪಿ. 22 ರ ಕ್ರಯ ಪತ್ರವನ್ನು ನಾನು ಓದಿರುತ್ತೇನೆ. ಅದರ ನಕ್ಷೆಯನ್ನು ನಾವು ಹಾಜರು ಪಡಿಸಿರುವುದಿಲ್ಲ. ಅದನ್ನು ಹಾಜರು ಪಡಿಸಲು ನಮಗೆ ಯಾವುದೇ ತೊಂದರೆ ಇಲ್ಲ. ಸರ್ವೆ ನಂ 25/2 ರ ಮೂಲ ವಿಸ್ತೀರ್ಣ 2 ಎಕರೆ 97 ಸೆಂಟ್ಸ್ ಆಗಿರುತ್ತದೆ. ನೇತ್ರಾವತಿ ಕಾರಂತರವರು 2022 ರಲ್ಲಿ ತೀರಿ ಹೋಗಿರುತ್ತಾರೆ. ಕರಾರು ಆದ ಮೇಲೆ ನಾವು ಪ್ರತಿವಾದಿಯರನ್ನು ಬೇಟಿ ಮಾಡಿ ಕ್ರಯ ಪತ್ರವನ್ನು ಮಾಡಿಕೊಡಲು ಕೇಳಿರುತ್ತೇವೆ. ಕ್ರಯ ಪತ್ರವನ್ನು ಮಾಡಿಸಲು ಪ್ರತಿವಾದಿಯ ತಾಯಿಯ ಮರಣ ಪ್ರಮಾಣ ಪತ್ರ ಬೇಕಾಗಿರುವುದರಿಂದ ಪ್ರತಿವಾದಿಯರೇ ಆ ದಾಖಲೆಗಳನ್ನು ಒದಗಿಸಬೇಕಾಗುತ್ತದೆ. ನಿ.ಪಿ. 4 ರಲ್ಲಿ ಕ್ರಯ ಪತ್ರ ಮಾಡುವ ಮೊದಲು ಮರಣ ಪ್ರಮಾಣ ಪತ್ರವನ್ನು ಪ್ರತಿವಾದಿಯರು ನೀಡಬೇಕೆಂಬ ಶರತ್ತು ಇರುವುದಿಲ್ಲ. ನಿ.ಪಿ. 9 ರರ ಪ್ರಕಾರ ದಾವಾ ಆಸ್ತಿಗಳು ಪ್ರತಿವಾದಿಯರ ಹೆಸರಿಗೆ 2019 ರಲ್ಲಿ ಬಂದಿರುತ್ತದೆ ಎಂದರೆ ಸರಿ. 2020 ರಲ್ಲಿ ನಾವು ಪ್ರತಿವಾದಿಯರನ್ನು ಕ್ರಯ ಪತ್ರವನ್ನು ಮಾಡಿಕೊಡುವಂತೆ ಕೇಳಿಕೊಳ್ಳುತ್ತೇವೆ. ಯಾವುದೇ ಕ್ರಯದ ಒಪ್ಪಂದವು ಇರುವುದಿಲ್ಲ ನೀವು ಪ್ರತಿವಾದಿಯರನ್ನು ಕ್ರಯ ಪತ್ರವನ್ನು ಬರೆದುಕೊಡುವಂತೆ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೌಲ್ಯ ಸರಕಾರಿ ಮೌಲ್ಯ ಮಾಪನದ ಪ್ರಕಾರ 1999 ನೇ ಇಸವಿಯಲ್ಲಿ 1 ಸೆಂಟ್ಸ್ ಗೆ 1,200 ರಿಂದ 2,000 ಇತ್ತು ಎಂದರೆ ಸರಿಯಲ್ಲ. ಸದರಿ ಜಾಗಕ್ಕೆ ಆ ಸಮಯದಲ್ಲಿ ಮಾರುಕಟ್ಟೆ ಮೌಲ್ಯ 1 ಸೆಂಟ್ಸ ಗೆ 5,000 ರಿಂದ 6,000 ರೂ ಇತ್ತು ಎಂದರೆ ಸರಿಯಲ್ಲ. ನಿ.ಪಿ. 8 ಸೃಷ್ಟಿತ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ವಿರುದ್ದ ಸುಳ್ಳು ಪ್ರಕರಣ

ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮತ್ತು ನನ್ನ ಪ್ರಮಾಣಪತ್ರದಲ ಸುಳ್ಳು ಅಂಶಗಳನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ**